# ಸುರತ್ಕಲ್ ಎನ್‌ಐಟಿಕೆ: ಕಾರ್ಯಾಗಾರಕ್ಕೆ ಚಾಲನೆ

**ಸುರತ್ಕಲ್, ಅ. 10:** ಸುರತ್ಕಲ್ ಎನ್‌ಐಟಿಕೆ ವತಿಯಿಂದ ಅಡ್ವಾನ್ಸ್‌ಡ್ ಮೆಟೀರಿಯಲ್ ಆಂಡ್ ಕ್ಯಾರೆಕ್ಟರೈಸೇಶನ್ ಟೆಕ್ನಿಕ್ಸ್ ಕುರಿತಾಗಿ ಐದು ದಿನಗಳ ಕಾರ್ಯಾಗಾರಕ್ಕೆ ಸೋಮವಾರ ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಚಾಲನೆ ನೀಡಲಾಯಿತು.



ಉದ್ಘಾಟನ ಕಾರ್ಯಕ್ರಮದಲ್ಲಿ ಮುಂಬಯಿಯ ಬಿಎಆರ್‌ಸಿ ವಿಜ್ಞಾನಿ ಡಾ| ಭಾಸ್ಕರ್ ಪಾಲ್ ತಂತ್ರಜ್ಞಾನ ಭವಿಷ್ಯದಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಈ ಬಗ್ಗೆ ನಿರಂತರವಾಗಿ ಪ್ರಗತಿ ಸಾಧಿಸುತ್ತಾ ಹೋದಾಗ ಯಶಸ್ಸು ನಮ್ಮದಾಗುತ್ತದೆ ಎಂದರು.

ಸಿಆರ್‌ಎಫ್ ಎನ್‌ಐಟಿಕೆ ಇದರ ಅಧ್ಯಕ್ಷ ಪ್ರೊ| ಸತ್ಯನಾರಾಯಣ ಅವರು ಸುಧಾರಿತ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಶೋಧನೆಗೆ ಅನೇಕರು ಆಸಕ್ತಿ ವಹಿಸಿದ್ದಾರೆ. ಸಿಆರ್‌ಎಫ್ ತನ್ನದೇ ಆದ ವೆಬ್ ಸೈಟ್ ಹೊಂದಿದ್ದು ಮಾಹಿತಿಗಳನ್ನು ಪಡೆಯುವ ಮೂಲಕ ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಎನ್‌ಐಟಿಕೆ ಪ್ರಭಾರಿ ನಿರ್ದೇಶಕ ಪ್ರೊ| ಜಿ.ಸಿ. ಮೋಹನ್ ಕುಮಾರ್ ಅವರು ಶುಭ ಹಾರೈಸಿದರು. ಸಿಆರ್‌ಎಫ್ ಸಹ ಅಧ್ಯಕ್ಷ ಡಾ| ಎಂ.ಆರ್. ರೆಹಮಾನ್, ಉಪನ್ಯಾಸಕ ವರ್ಗ, ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

5 ದಿನಗಳ ಕಾರ್ಯಾಗಾರವನ್ನು ಮಾಲ್ವೆರ್ನ್ ಪ್ಯಾನಾಲಿಟಿಕಲ್, ಸಿಗ್ಮಾ ಲ್ಯಾಬ್, ಪರ್ಕಿನ್-ಎಲ್ಮರ್ ಮತ್ತು ಎನ್‌ಐಟಿಕೆ ಸುರತ್ಕಲ್ ಜಂಟಿಯಾಗಿ ಪ್ರಾಯೋಜಿಸುತ್ತಿವೆ.

Udayavani, Date: 11/10/2022 p, no - II,04